# ಶ್ರಾವಣ ದರ್ಶನ : 9 ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಜು. 29** : ಜಪ ತಪಗಳು ತಾತ್ಕಾಲಿಕ. ಕಾಯಕ ಪೂರ್ಣಾವಧಿಯ ಪ್ರಕ್ರಿಯೆ. ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟರೆ ಭಾರತ ಸಮೃದ್ಧವಾಗುತ್ತದೆ. ನಮಗೆ ಕಾಯಕ, ಪೂಜೆಯಾಗಬೇಕು. ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಳ್ಳಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಮುರುಘಾಮಠದಿಂದ ಬುಧವಾರ ನಡೆದ ಶ್ರಾವಣ ದರ್ಶನ ಒಂಬತ್ತನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಗುರುತ್ವ - ಜಾತ್ಯತೀತ ಹಾಗು ಪಕ್ಷಾತೀತ ನಿಲುವು ವಿಷಯ ಕುರಿತು ಮಾತನಾಡಿದ ಅವರು, ಭಾರತೀಯ ಪರಂಪರೆಯಲ್ಲಿ ಗುರು ಪರಂಪರೆ ಇದೆ. 12ನೇ ಶತಮಾನದಲ್ಲಿ ಮಠಗಳು ಅಸ್ತಿತ್ವದಲ್ಲಿ ಇದ್ದವು.

ಮಾನವೀಯತೆ + ಧರ್ಮತ್ವ = ಗುರುತ್ವ. ಗುರುತ್ವದ ಆರಂಭದ ಸ್ಥಿತಿಯೇ ಮಾನವೀಯತೆ, ಮಾನವತ್ವ. ಅದು ದೈವತ್ವ ಎಂತಲೂ ಕರೆಯಬಹುದು. ಶರಣತತ್ವದಲ್ಲಿ ಗುರುತ್ವ ಇದೆ. ಗುರುತ್ವದಲ್ಲಿ ಶರಣತ್ವ ಇಲ್ಲದೇ ಇರಬಹುದು. ಇದಕ್ಕೆ ಶರಣತ್ವ ಸೇರಿಕೊಂಡರೆ ಗಟ್ಟಿತನ ಉಳಿಯುತ್ತದೆ. ಗು-ಅಜ್ಞಾನ, ರು-ನಿವಾರಿಸುವವನು. ಅಜ್ಞಾನವನ್ನು ನಿವಾರಿಸುವವನು ಗುರುವಾಗುತ್ತಾನೆ. ಯಾರು ಬೇಕಾದರೂ ಗುರುವಾಗಬಹುದು. ಆದರೆ ಸದ್ಗುರುವಾಗುವುದು ವಿರಳ. ಸತ್ಯದ ಸಾಕ್ಷಾತ್ಕಾರ ಮಾಡಿಸುವವನು ಗುರುವಾಗುವನು. ಗುರುತ್ವದ ಚಿಂತನೆ ಎತ್ತಿಕೊಳ್ಳಬೇಕಿದೆ. ನಾಲ್ಕು ಹಂತದ ಗುರುತ್ವವನ್ನು ನೋಡಬಹುದು.

ಕತ್ತಲೆಯಿಂದ ಕತ್ತಲೆಗೆ ಕರೆದುಕೊಂಡು ಹೋಗುವವರು : ಪ್ರಕಾಶದ ದರ್ಶನವನ್ನು ಮಾಡಿಸದವರು ಇದ್ದಾರೆ. ಒಂದುರೀತಿ ಬಳ್ಳಿಗುರುಡುರಿದ್ದಂತೆ. ಬೆಳಕೆಂದರೆ ಅವರಿಗೆ ಒಗ್ಗುವುದಿಲ್ಲ. ಇವರಿಗೆ ಜಾತಿಯ ನಿಶೆ ಬಂದಿರುತ್ತದೆ. ಅಂಧಕಾರವನ್ನು ಅಪ್ಪಿಕೊಳ್ಳುವವರು. ಇವರಲ್ಲಿ ಅಜ್ಞಾನ ಇರುತ್ತದೆ. ಇವರು ಕತ್ತಲೆಯನ್ನು ಪ್ರಕಾಶವೆಂದು ಭ್ರಮಿಸುವವರು. ಕತ್ತಲೆಗೆ ತಮ್ಮ ಜೀವನವನ್ನು ಅಳೆದುಅಳೆದು ಹಾಕುವವರು. ಕತ್ತಲೆ ಲೋಕದೊಳಗೆ ಕಾರುಬಾರು ನಡೆಸುವವರು. ಅದು ಭೂಗತ ಜಗತ್ತು.

ಬೆಳಕಿನಿಂದ ಬೆಳಕಿನೆಡೆಗೆ ಕರೆದುಕೊಂಡು ಹೋಗುವವರು : ಬೆಳಕು ಕೂಡ ಒಮ್ಮೊಮ್ಮೆ ಅಶಾಶ್ವತ. ಸೂರ್ಯ ಬೆಳಕು ಅಶಾಶ್ವತ; ಚಂದ್ರನ ಬೆಳಕು ತಾತ್ಕಾಲಿಕ. ಬೆಳಕು ನೀಡುವ ಸೂರ್ಯ 12 ಗಂಟೆ ಮಾತ್ರ ಇರುತ್ತಾನೆ. ಕೆಲವು ರಾಷ್ಟ್ರಗಳಲ್ಲಿ 4-5 ಗಂಟೆ ಮಾತ್ರ ಸೂರ್ಯಪ್ರಕಾಶ ಇರುತ್ತದೆ. ಪ್ರಕೃತಿ ವಿಸ್ಮಯದಿಂದ ಕೂಡಿದೆ. ಸೂರ್ಯ ಚಂದ್ರರ ಬೆಳಕು ಅಶಾಶ್ವತವಾಗಿರುವಾಗ ಮಠ, ಮಂದಿರ, ಇಗರ್ಜಿ, ಬಸದಿ ಚರ್ಚುಗಳು ಮೊದಲಾದೆಡೆ ಹಚ್ಚಿಟ್ಟ ದೀಪಗಳು ಹೇಗೆ ಶಾಶ್ವತವಾಗಿರುತ್ತವೆ. ಬೆಳಕು ಸುಮ್ಮನೆ ಪ್ರಜ್ವಲಿಸುವುದಿಲ್ಲ. ಬಹಿರಂಗದಲ್ಲಿ ದೀಪ ಹಚ್ಚುವುದು ಸುಲಭ.

ಬಿರುಗಾಳಿಗೆ ಇಟ್ಟ ದೀಪ ಬಹಳ ಹೊತ್ತು ಇರುವುದಿಲ್ಲ. ಪರಮಾರ್ಥ ಪ್ರಕಾಶ. ಇದು ಶಾಶ್ವತವಾದುದು. ಜ್ಞಾನದ ದೀಪ, ವಿಜ್ಞಾನ, ತಂತ್ರಜ್ಞಾನದ ದೀಪ. ಸುಜ್ಞಾನ, ತಂತ್ರಜ್ಞಾನ ಮತ್ತು ತತ್ವಜ್ಞಾನದ ದೀಪ. ಇದರಾಚೆಗೆ ಪರಮಾರ್ಥ ಪ್ರಕಾಶ. ಬೌದ್ಧಿಕತೆ ಶಾಶ್ವತವಾದುದು. ಯಾವ ದೀಪಗಳು ಇಲ್ಲದೆಯೂ ಪರಮಾರ್ಥ ಪ್ರಕಾಶ ಜಗತ್ತಿಗೆ ಬೆಳಕು ನೀಡುತ್ತ ಬಂದಿದೆ. ಇದು ಜ್ವಾಜಲ್ಯಮಾನವಾದುದು. ಬಹಿರಂಗದಲ್ಲಿ ಬಿರುಗಾಳಿ ಬೀಸುತ್ತಿರುತ್ತದೆ. ಶರೀರವೆಂಬ ದೇಗುಲದಲ್ಲಿ ಪರಮಾರ್ಥವೆಂಬ

ಪ್ರಕಾಶ ಹೊತ್ತಿಸುವುದು ಕಷ್ಟದ ಕೆಲಸ. ಕಾರಣ ಮಾನವ ಚಂಚಲಯುಕ್ತನಾದವನು. ಇಂತಹವರ ಹತ್ತಿರ ಪರಮಾರ್ಥ ಪ್ರಕಾಶ ಹತ್ತಿಸುವುದು ಸುಲಭದ ಮಾತಲ್ಲ.

**ಏತ ತಲೆವಾಗಿದಡೇನು, ಗುರುಭಕ್ತನಾಗಬಲ್ಲುದೆ?**

**ಇಕ್ಕುಳ ಕೈಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೆ?**

**ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೆ?**

**ಕೂಡಲಸಂಗನ ಶರಣರು ಬಂದ ಬರವ, ನಿಂದ ನಿಲವ**

**ಅನಂಗಸಂಗಿಗಳೆತ್ತ ಬಲ್ಲರು.**

ನಮ್ಮ ಶರೀರ ಒಂದಷ್ಟು ಭಕ್ತಿಯನ್ನು ಮಾಡಿದಂತೆ ತೋರಿಸುತ್ತದೆ. ಆಂತರ್ಯದಲ್ಲಿ ಭಕ್ತಿ ಇರುವುದೇ ಇಲ್ಲ. ಜಪ ತಪಗಳು ಒಂದೊಂದು ಸಮಯಕ್ಕೆ ಸೀಮಿತವಾಗಿರುತ್ತವೆ. ಪೂಜೆಗೆ ಕುಳಿತಾಗ ಭಕ್ತ, ಮುನಿದಾಗ ಮಾನವ. ಜಪ ತಪಗಳು ತಾತ್ಕಾಲಿಕ. ಕಾಯಕ ಪೂರ್ಣಾವಧಿಯ ಪ್ರಕ್ರಿಯೆ. ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟರೆ ಭಾರತ ಸಮೃದ್ಧವಾಗುತ್ತದೆ. ನಮಗೆ ಕಾಯಕ, ಪೂಜೆಯಾಗಬೇಕು. ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಳ್ಳಬೇಕು. ವೃತ್ತಿಧರ್ಮದೊಳಗೊಂದು ಕಾಯಕ ಧರ್ಮ ಇದೆ. ವೃತ್ತಿಧರ್ಮ ಬೇರೆ ಮತ ಧರ್ಮ ಬೇರೆ. ಇವೆರಡರ ಮಧ್ಯೆ ಸಂಬಂಧ ಬೆಸೆಯಬೇಕು.

ಬೆಳಕಿನಿಂದ ಕತ್ತಲೆಗೆ ಕರೆದುಕೊಂಡು ಹೋಗುವವರು : ಇವರು ಅತ್ಯಂತ ಅಪಾಯಕಾರಿ. ಇವರು ಮೌಢ್ಯವನ್ನು ಬಿತ್ತುವವರು. ಮೌಢ್ಯವನ್ನು ಬೆಳೆಯುವವರು. ಮುಗ್ಧರನ್ನು ನಿಯಂತ್ರಿಸುವ, ಆಟವಾಡಿಸುವ ಅಸ್ತ್ರ ಅವರ ಬಳಿ ಇರುತ್ತದೆ. ಅದುವೆ ಶೋಷಣೆ. ಸಾಮಾನ್ಯ ಜನರ ನಡುವೆ ಮುಗ್ಧರಿದ್ದಾರೆ. ಯಾವ ವ್ಯಕ್ತಿ ಶೋಷಿಸುತ್ತಾನೋ ಅವನು ನಿಜವಾದ ಗುರು ಅಲ್ಲ. ಎಲ್ಲ ದಾರ್ಶನಿಕರು ಶೋಷಣೆಯ ವಿರುದ್ಧ ಹೋರಾಡುತ್ತಿದ್ದಾರೆ. ಮುಗ್ಧರನ್ನು ಶೋಷಿಸುವವರು ಜಾತಿವಾದಕ್ಕೆ ನೀರು ಗೊಬ್ಬರ ಹಾಕುತ್ತಾರೆ. ಜಾತಿವಾದ ಕ್ರೂರವಾದ ವಾದ. ಇದು ಅಮಾನವೀಯವಾದುದು. ಮುಂದುವರಿದ ರಾಷ್ಟ್ರಗಳಲ್ಲಿ ಜಾತಿವಾದ ಇದೆ. ಅಮೆರಿಕದಲ್ಲಿಯೂ ಕರಿಯರು ಬಿಳಿಯರ ಮಧ್ಯೆ ಸಮರ ನಡೆಯುತ್ತಿದೆ. ಆಧುನಿಕ ಜಗತ್ತಿನಲ್ಲಿ ಜಾತಿವಾದ ಜೀವಂತವಾಗಿದೆ. ಅನಾಗರಿಕವಾದ ಅಮಾನವೀಯವಾದ ಜಾತಿವಾದ ನಿವಾರಿಸುವ ಪ್ರಯತ್ನ ನಡೆದಿದೆ.

ಕತ್ತಲೆಯಿಂದ ಬೆಳಕಿನೆಡೆಗೆ ಕರೆದುಕೊಂಡು ಹೋಗುವವರು : ಇವರು ಜಾತ್ಯಾತೀತರು. ಅವರ ದೃಷ್ಟಿಯಲ್ಲಿ ಮಾನವಜಾತಿ ಅದೊಂದೇ ಜಾತಿ. ಇಲ್ಲಿ ವರ್ಗೀಕರಣ ಇರುವುದಿಲ್ಲ. ಸಮಸಮಾಜದ ನಿರ್ಮಾಪಕರು. ದಲಿತ-ಬಲಿತ, ಬಡವ-ಶ್ರೀಮಂತ ಎನ್ನುವ ಅಂತರಗಳು ನಾಗರಿಕ ಸಮಾಜದಿಂದ ನಿವಾರಣೆ ಆಗಬೇಕೆಂದು ಸಮಸಮಾಜದ ಸ್ಥಾಪನೆಗಾಗಿ ಇಡೀ ಬದುಕನ್ನು ಸಮರ್ಪಣೆ ಮಾಡಿದವರು ದೇಶದಲ್ಲಿ ಪ್ರಪಂಚದಲ್ಲಿ ಅನೇಕರು ಬಂದುಹೋಗಿದ್ದಾರೆ. ಕೆಲವರು ಸ್ತ್ರೀ ಒಂದು ಜಾತಿ, ಪುರುಷ ಒಂದು ಜಾತಿ ಎನ್ನುತ್ತಾರೆ. ಮೇಲು-ಕೀಳು ಇದೆ ಎನ್ನುತ್ತಾರೆ. ಜಾತಿ ಕಾರಣದಿಂದ ಕೆಲವರು ಅವಕಾಶ ವಂಚಿತರಾಗಿದ್ದಾರೆ. ನಾವು ಜಾತ್ಯತೀತರಾಗಬೇಕು. ಗುರುಗಳಿಗೆ ಜಾತ್ಯತೀತ ನಿಲುವು. ಪಕ್ಷಾತೀತ ನಿಲುವು ಇರಬೇಕು. ಸರ್ವಜನಾಂಗವನ್ನು ಶ್ರೀಮಠ ಪ್ರೀತಿಸುತ್ತದೆ. ಬುದ್ಧ, ಬಸವ, ಏಸು, ಪೈಗಂಬರ್ ಮೊದಲಾದ ದಾರ್ಶನಿಕರು ಜಾತಿಯೊಳಗಿದ್ದು ಜಾತಿಯನ್ನು ಮೀರಿದರು. ಜಾತಿಯ ರೇಖೆಗಳನ್ನು ಮುರಿದರು. ಹಾಗಾಗಿ ಅವರು ವಿಶ್ವಮಾನವರಾದರು.

**ತಂದೆ ನೀನು ತಾಯಿ ನೀನು, ಬಂಧು ನೀನು ಬಳಗು ನೀನು**

**ನೀನಲ್ಲದೆ ಮತ್ತಾರು ಇಲ್ಲ, ಹಾಲಲ್ಲದ್ದು, ನೀರಲ್ಲದ್ದು**

**ಕೂಡಲಸಂಗಮದೇವಾ**